**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು-ಮಡಿಕೇರಿ**

**<u>ಎಸ್.ಸಿ ಸಂಖ್ಯೆಃ 23/2023</u>**

ಪ್ರಾಸಾ-21
ಚಾಸಾ-31

ಸಾಕ್ಷಿದಾರರ ಹೆಸರು: ಮೋಹನ್ ರಾಜ್

ತಂದೆಯ ಹೆಸರು : ಪೆರಿಯಸ್ವಾಮಿ

ವಯಸ್ಸು : 38 ವರ್ಷ

ವೃತ್ತಿ : ಪಿ.ಎಸ್.ಐ, ಸುಂಟಿಕೊಪ್ಪ ಪೊಲೀಸ್ ಠಾಣೆ.

ವಾಸ : ಸುಂಟಿಕೊಪ್ಪ.

**ಸಾಕ್ಷಿಯನ್ನು ದಿನಾಂಕ 03-07-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ</u>**:

1. ನಾನು ಏಪ್ರಿಲ್-2020 ರಿಂದ ಜೂನ್-2023 ರವರೆಗೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆ.

2. ದಿನಾಂಕ 28-09-2022 ರಂದು ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಮಧ್ಯಾಹ್ನ 2.00 ಗಂಟೆಗೆ ಠಾಣಾ ಸಿಬ್ಬಂದಿಯಾದ ಪ್ರಾಸಾ-20 ರವರು ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ಪ್ರಾಸಾ-1 ರವರ ಹೇಳಿಕೆಯನ್ನು ಪಡೆದು ತಂದು ನನ್ನ ಮುಂದೆ ಹಾಜರುಪಡಿಸಿದ್ದನ್ನು ಸ್ವೀಕರಿಸಿ ಠಾಣಾ ಮೊಕದಮ್ಮೆ ಸಂಖ್ಯೆಃ 38/2022 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಅದನ್ನು ಸಿಬ್ಬಂದಿಯ ಮೂಲಕ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆನು. ನಾನು ಸ್ವೀಕರಿಸಿರುತ್ತೇನೆ. ಸ್ವೀಕರಿಸಿದ ದೂರು ನಿಪಿ-1 ಆಗಿರುತ್ತದೆ. ನಿಪಿ-1 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-1(ಸಿ)

ಎಂದು ಗುರುತಿಸಲಾಯಿತು. ನಾನು ದಾಖಲಿಸಿದ್ದ ಪ್ರಥಮ ವರ್ತಮಾನ ವರದಿಯನ್ನು ನಾನು ಈಗ ನೋಡುತಿದ್ದು, ಸಾಕ್ಷಿ ಗುರುತಿಸಿದ ಪ್ರಥಮ ವರ್ತಮಾನ ವರದಿಯನ್ನು ನಿಪಿ-28 ಎಂದು, ನಿಪಿ-28 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು.

3. ನಂತರ ಅದೇ ದಿನ ಕೃತ್ಯ ನಡೆದ ಸ್ಥಳವಾದ ಅರೆಕಾಡು ಗ್ರಾಮದ ಎಂ.ಎಸ್.ಟಿ ಹೋಟೆಲ್ ಕಟ್ಟಡಕ್ಕೆ ತೆರಳಿ ಅಲ್ಲಿ ಹಾಜರಿದ್ದ ಪ್ರತ್ಯಕ್ಷದರ್ಶಿಯಾದ ಪ್ರಾಸಾ-2 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಪಂಚರಾದ ಪ್ರಾಸಾ-5 ಮತ್ತು ಪ್ರಾಸಾ-6 ರವರ ಸಮಕ್ಷಮ ಸಂಜೆ 4.00 ಗಂಟೆಯಿಂದ 5.00 ಗಂಟೆಯವರೆಗೆ ನಿಪಿ-2 ರಂತೆ ಪಂಚನಾಮ ಕ್ರಮವನ್ನು ಜರುಗಿಸಿದೆನು. ಎಂ.ಎಸ್.ಟಿ ಹೋಟೆಲ್ ನ್ನು ಪ್ರವೇಶಿಸಿದಾಗ 13 X 7 ಅಡಿ ಉದ್ದ-ಅಗಲದ ಹಾಲ್ ನಲ್ಲಿ ಮೊದಲ ಕೃತ್ಯ ನಡೆದಿದ್ದು, ನಂತರ ಗಾಯಾಳು ಪ್ರಾಸಾ-1 ಹಿಂಬಾಗಿಲಿನ ಮೂಲಕ ಹೊರ ಹೋದ ಸಂದರ್ಭದಲ್ಲಿ ಎರಡನೇ ಬಾರಿಗೆ ಪ್ರಾಸಾ-1 ರವರ ಮೇಲೆ ಹೋಟೆಲ್ ನ ಹಿಂಭಾಗ ಹಲ್ಲೆ ಆಗಿದ್ದು, ಸದರಿ ಸ್ಥಳದಲ್ಲಿ ಪ್ರಾಸಾ-1 ಕುಸಿದು ಬಿದಿದ್ದು, ಸದರಿ ಸ್ಥಳದ ಮಣ್ಣಿನ ಮೇಲೆ ರಕ್ತದ ಕಲೆಗಳು ಕಂಡು ಬಂದಿದ್ದು, ರಕ್ತವಿರುವ ಮಣ್ಣನ್ನು ಹಾಗೂ ಮಾದರಿ ಮಣ್ಣನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಬಿಳಿ ಚೀಲಕ್ಕೆ ಹಾಕಿ, ಸೀಲು ಮಾಡಿ, ವಶಕ್ಕೆ ಪಡೆದೆನು. ನಂತರ ಪ್ರಾಸಾ-2 ರವರು ಹೋಟೆಲ್ ಮುಂಭಾಗಕ್ಕೆ ನನ್ನನು ಹಾಗೂ ಪಂಚರನ್ನು ಕರೆದುಕೊಂಡು ಬಂದು ಹೋಟೆಲ್ ನ ಮುಂಭಾಗದಲ್ಲಿ ಇದ್ದ ಮಹೇಂದ್ರ ಜೀಪ್ ಸಂಖ್ಯೆ KA-31-M-0210 ನ್ನು ತೋರಿಸಿ, ಪ್ರಾಸಾ-1 ಹಾಗೂ 2 ರವರಿಗೆ ಆರೋಪಿಗಳು ಹಲ್ಲೆ ಮಾಡಿದ ನಂತರ ತಮ್ಮ ಕೈಯಲ್ಲಿ ಇದ್ದ ಮಚ್ಚಿನಿಂದ ಜೀಪಿನ ಮುಂಭಾಗದ ಗಾಜಿನ್ನು ಒಡೆದು ಜಖಂಗೊಳಿಸಿರುವುದಾಗಿ ತಿಳಿಸಿದ ಮೇರೆಗೆ ನಾನು ಅದನ್ನು ಪರಿಶೀಲನೆ ಮಾಡಿದಾಗ ಜೀಪಿನ ಮುಂಭಾಗದ

ಗಾಜು ಪುಡಿಪುಡಿಯಾಗಿರುವುದು ಕಂಡು ಬಂತು. ನಂತರ ಜೀಪಿನ ಬಾನೇಟ್ ಮೇಲೆ ಬಿದಿದ್ದ ಪುಡಿಯಾದ ಗಾಜಿನ ಚೂರನ್ನು ತನಿಖೆಗಾಗಿ ಒಂದು ಪ್ಲಾಸ್ಟಿಕ್ ಡಬ್ಬಕ್ಕೆ ಹಾಕಿ, ಬಿಳಿ ಬಟ್ಟೆಯಿಂದ ಸುತ್ತಿ, ಸೀಲು ಮಾಡಿ ವಶಕ್ಕೆ ಪಡೆದಿರುತ್ತೇನೆ. ಸದರಿ ಜೀಪು ಪ್ರಾಸಾ-1 ರವರಿಗೆ ಸೇರಿದ್ದಾಗಿರುತ್ತದೆ. ನಂತರ ಜೀಪು ತನಿಖೆಗೆ ಅವಶ್ಯಕತೆ ಇದ್ದದ್ದರಿಂದ ಮುಂದಿನ ಕ್ರಮಕ್ಕಾಗಿ ಜೀಪನ್ನು ವಶಕ್ಕೆ ಪಡೆದಿರುತ್ತೇನೆ. ನಿಪಿ-2 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಪ್ರಾಸಾ-14 ರವರಿಂದ ಸ್ಥಳದ 3 ಫೋಟೊಗಳನ್ನು ತೆಗೆದಿರುತ್ತೇನೆ. ಅವುಗಳು ನಾನು ಈಗ ನ್ಯಾಯಾಲಯದಲ್ಲಿ ನೋಡುತ್ತಿರುವ ನಿಪಿ-3 ಆಗಿರುತ್ತವೆ. ನಿಪಿ-3 ರ 3ನೇ ಫೋಟೊದಲ್ಲಿ ಜಖಂಗೊಂಡ ಜೀಪು ಕಾಣುತ್ತದೆ. ನಾನು ಸ್ಥಳದಿಂದ ವಶಕ್ಕೆ ಪಡೆದ ರಕ್ತದ ಕಲೆ ಇರುವ ಮಣ್ಣು, ಮಾದರಿ ಮಣ್ಣು ಹಾಗೂ ಜೀಪಿನ ಮುಂಭಾಗದ ಗ್ಲಾಸಿನ ಚೂರು ಈಗ ನ್ಯಾಯಾಲಯದ ಮುಂದೆ ನೋಡುತ್ತಿರುವ ಮು.ಮಾ-7 ರಿಂದ 9 ಆಗಿರುತ್ತದೆ. ಸದರಿ ಮಹಜರ್ ನ್ನು ನಾನು ಚಾಸಾ-20 ರವರಿಂದ ಬರೆಸಿದ್ದೆ.

4. ನಂತರ ಠಾಣೆಗೆ ವಾಪಸ್ಸು ಬಂದು ಕೃತ್ಯ ಸ್ಥಳದಲ್ಲಿ ವಶಪಡಿಸಿಕೊಂಡಿದ್ದ ಸ್ವತ್ತುಗಳನ್ನು ಸ್ವತ್ತುಪಟ್ಟಿಯಲ್ಲಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆನು. ನಂತರ ಪ್ರಾಸಾ-2 ರವರಿಗೆ ಪ್ರಾಸಾ-1 ಮತ್ತು 2 ರವರು ಕೃತ್ಯ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಹಾಜರುಪಡಿಸುವಂತೆ ತಿಳಿಸಿ, ನೋಟಿಸ್ಸು ಜಾರಿ ಮಾಡಿದೆನು.

5. ನಂತರ ದಿನಾಂಕ 29-09-2022 ರಂದು ಬೆಳಿಗ್ಗೆ 10.00 ಗಂಟೆಗೆ ಪ್ರಾಸಾ-2 ರವರು ಠಾಣೆಗೆ ಹಾಜರಾಗಿ ಕೃತ್ಯ ಸ್ಥಳದಲ್ಲಿ ತಾನು ಹಾಗೂ ಪ್ರಾಸಾ-1 ರವರು ಘಟನಾ ಸಂದರ್ಭ ಧರಿಸಿದ್ದ ಬಟ್ಟೆಗಳು ಇವೇ ಎಂದು ನನ್ನ ಮುಂದೆ ಹಾಜರುಪಡಿಸಿದ್ದು, ಅವುಗಳನ್ನು ವಶಪಡಿಸಿಕೊಳ್ಳುವ ಸಲುವಾಗಿ ಪಂಚರಾದ ಪ್ರಾಸಾ-5 ಹಾಗೂ 6 ರವರನ್ನು ಠಾಣೆಗೆ ಬರಮಾಡಿಕೊಂಡು ಅವರಿಗೆ ಈ

ಪ್ರಕರಣದ ಮಾಹಿತಿಯನ್ನು ತಿಳಿಸಿ ಪಂಚರಾಗಿ ಸಹಕರಿಸುವಂತೆ ನೋಟಿಸ್ಸನ್ನು ಜಾರಿ ಮಾಡಿದೆನು. ಅವರು ಒಪ್ಪಿದ ನಂತರ ಪ್ರಾಸಾ-2 ರವರು ಹಾಜರುಪಡಿಸಿದ್ದ ಬಟ್ಟೆಗಳನ್ನು ಪರಿಶೀಲಿಸಿದಾಗ ಅವುಗಳ ಪೈಕಿ ಒಂದು ರಕ್ತದ ಕಲೆ ಇರುವ ಕಪ್ಪು ಬಣ್ಣದ ಜೀನ್ಸ್ ಪ್ಯಾಂಟ್ ಆಗಿದ್ದು, ಅದರ ಬಲಗಾಲಿನ ಮುಂಭಾಗದಲ್ಲಿ ಹರಿದಿತ್ತು. ಇನ್ನೊಂದು ತಿಳಿ ಹಸಿರು ಬಣ್ಣದ ರಕ್ತಸಿಕ್ತ ಅರ್ಧ ತೋಳಿನ ಟಿ-ಶರ್ಟ್ ಆಗಿದ್ದು, ಅದರ ಮುಂಭಾಗ ಹಾಗೂ ಎರಡು ಕೈಗಳ ಭಾಗ ಹರಿದಿತ್ತು. ಮೂರನೇಯ ಬಟ್ಟೆ ರಕ್ತದ ಕಲೆ ಇರುವ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಆಗಿದ್ದು, ಅದರ ಬಲಕಾಲಿನ ಅರ್ಧ ಭಾಗವು ಕಟ್ ಮಾಡಿ ತೆಗೆಯಲಾಗಿರುತ್ತದೆ. ಸದರಿ ಬಟ್ಟೆಗಳನ್ನು ಬಿಳಿ ಬಟ್ಟೆಗಳಲ್ಲಿ ಪ್ರತ್ಯೇಕ-ಪ್ರತ್ಯೇಕವಾಗಿ ಸುತ್ತಿ, ಹೊಲೆದು, ಸೀಲು ಮಾಡಿ, ನಿಪಿ-5 ರಡಿ ವಶಕ್ಕೆ ಪಡೆದೆನು. ನಿಪಿ-5 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-5(ಡಿ) ಎಂದು ಗುರುತಿಸಲಾಯಿತು. ಈಗ ನಾನು ನ್ಯಾಯಾಲಯದಲ್ಲಿ ನೋಡುತ್ತಿರುವ ಮು.ಮಾ-1, 2 ಹಾಗೂ 6 ಬಟ್ಟೆಗಳನ್ನು ನಾನು  ನಿಪಿ-5 ರಡಿ ವಶಪಡಿಸಿದ್ದೆ. ನಿಪಿ-5 ರ ಸಂದರ್ಭ ನಿಪಿ-6 ರಂತೆ 3 ಫೋಟೊಗಳನ್ನು ತೆಗೆಯಲಾಗಿತ್ತು. ನಿಪಿ-5 ಮಹಜರ್ ನ್ನು ಬೆಳಿಗ್ಗೆ 10.00 ಗಂಟೆಯಿಂದ 11.00 ಗಂಟೆಯವರೆಗೆ ಚಾಸಾ-20 ರವರ ಮೂಲಕ ಬರೆಸಲಾಯಿತು. ನಿಪಿ-5 ರ ಸಮಯದಲ್ಲಿ ಪ್ರಾಸಾ-14 ರವರ ಮೂಲಕ ಫೋಟೊ ಹಾಗೂ ವಿಡಿಯೋ ಚಿತ್ರೀಕರಣ ಮಾಡಲಾಯಿತು.

6. ನಂತರ ಪ್ರಾಸಾ-2 ರವರ ರಕ್ತದ ಮಾದರಿಯನ್ನು ಪರೀಕ್ಷಿಸಿ ವರದಿ ನೀಡುವಂತೆ ಪ್ರಾಸಾ-2 ರವರನ್ನು ಸಿಬ್ಬಂದಿಯ ಮೂಲಕ ಕೋರಿಕೆ ಪತ್ರದೊಂದಿಗೆ ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆನು. ನಿಪಿ-5 ರಡಿ ವಶಪಡಿಸಿಕೊಂಡ ಸ್ವತ್ತುಗಳನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು.

7. ಪ್ರಾಸಾ-14 ರವರು ತನಿಖಾ ಸಂದರ್ಭ ತೆಗೆದ ಫೋಟೋಗಳನ್ನು ಮತ್ತು ವಿಡಿಯೋಗಳು ಇರುವ ನಿಪಿ-4 ಸಿಡಿಯನ್ನು ನಿಪಿ-15 ದೃಢೀಕರಣ ಪತ್ರದೊಂದಿಗೆ ನೀಡಿದ್ದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿದೆನು. ನಿಪಿ-15 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-15(ಬಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಪ್ರಾಸಾ-2 ರಿಂದ ಪ್ರಾಸಾ-6 ಹಾಗೂ ಚಾಸಾ-5 ರವರ ರ ಹೇಳಿಕೆಗಳನ್ನು ದಾಖಲಿಸಿದೆನು.

8. ನಂತರ ಆರೋಪಿತರ ಪತ್ತೆಯ ಬಗ್ಗೆ ಸಿಬ್ಬಂದಿಗಳನ್ನು ನೇಮಿಸಿದೆನು. ದಿನಾಂಕ 07-10-2022 ರಂದು ಕೃತ್ಯ ಸ್ಥಳವಾದ ಎಂ.ಎಸ್.ಟಿ. ಹೋಟೆಲ್ ಇರುವ ಬಗ್ಗೆ ದೃಢಪತ್ರ ನೀಡುವಂತೆ ಹೊಸ್ಕೇರಿ ಗ್ರಾಮ ಪಂಚಾಯ್ತಿಗೆ ಮನವಿ ಪತ್ರವನ್ನು ಕಳುಹಿಸಿಕೊಟ್ಟೆನು. ನಂತರ ಚಿಕಿತ್ಸೆಯ ಸಲುವಾಗಿ ಮಂಗಳೂರಿನ ಕೆ.ಎಂ.ಸಿ ಆಸ್ಪತ್ರೆಗೆ ದಾಖಲಾಗಿದ್ದ ಪ್ರಾಸಾ-1 ರವರ ರಕ್ತದ ಗುಂಪಿನ ಬಗ್ಗೆ ದೃಢೀಕರಣ ಪತ್ರವನ್ನು ನೀಡುವಂತೆ ಮನವಿ ಪತ್ರವನ್ನು ಕಳುಹಿಸಿದ್ದು, ಸದರಿ ಕೆ.ಎಂ.ಸಿ ಆಸ್ಪತ್ರೆಯವರು ನಿಪಿ-21 ರಂತೆ ಪ್ರಾಸಾ-1 ರವರ ರಕ್ತದ ಗುಂಪಿನ ಬಗ್ಗೆ ದೃಢೀಕರಣ ಪತ್ರವನ್ನು ನೀಡಿರುತ್ತಾರೆ. ನಿಪಿ-21 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-21(ಬಿ) ಎಂದು ಗುರುತಿಸಲಾಯಿತು.

9. ದಿನಾಂಕ 09-10-2022 ರಂದು ಈ ಪ್ರಕರಣದ 1 ಹಾಗೂ 3 ನೇ ಆರೋಪಿಗಳನ್ನು ಪ್ರಾಸಾ-13 ಹಾಗೂ 15 ಹಾಗೂ ಚಾಸಾ-17 ರವರು ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲದಲ್ಲಿ ವಶಕ್ಕೆ ಪಡೆದು ಠಾಣೆಯಲ್ಲಿ ಬೆಳಿಗ್ಗೆ 8.00 ಗಂಟೆಗೆ ನಿಪಿ-16 ವರದಿಯೊಂದಿಗೆ ನನ್ನ ಮುಂದೆ ಹಾಜರುಪಡಿಸಿದರು. ನಾನು 1 ಹಾಗೂ 3 ನೇ ಆರೋಪಿಗಳನ್ನು ದಸ್ತಗಿರಿ ಮಾಡಿ, ಅವರ ಸ್ವ-ಇಚ್ಛಾ ಹೇಳಿಕೆಗಳನ್ನು ಪಂಚರಾದ ಪ್ರಾಸಾ-7 ಹಾಗೂ ಪ್ರಾಸಾ-8 ರವರ ಸಮಕ್ಷಮ ದಾಖಲಿಸಿಕೊಂಡೆನು. 1 ಆರೋಪಿ ತನ್ನ ಸ್ವ-ಇಚ್ಛಾ ಹೇಳಿಕೆಯಲ್ಲಿ "ಕೃತ್ಯಕ್ಕೆ ಉಪಯೋಗಿಸಿದ್ದ

ಮೂರು ಕತ್ತಿಗಳನ್ನು ಹಾಗೂ ಕೃತ್ಯದ ಸಮಯದಲ್ಲಿ ತಾನು ಧರಿಸಿದ್ದ ಬಟ್ಟೆಗಳನ್ನು ತನ್ನ ವಾಸದ ಮನೆಯ ಹಿಂಭಾಗದ ಗೋಡೆಯ ಒತ್ತಿನಲ್ಲಿ ಇಟ್ಟಿದ್ದು, ತನ್ನನ್ನು ಕರೆದುಕೊಂಡು ಹೋದರೆ ತೆಗೆದುಕೊಡುತ್ತೇನೆ" ಎಂದು ಹೇಳಿರುತ್ತಾನೆ. 1 ನೇ ಆರೋಪಿಯ ಸ್ವ-ಇಚ್ಛಾ ಹೇಳಿಕೆಯ ಸದರಿ ನಿರ್ದಿಷ್ಟ ಭಾಗವನ್ನು ನಿಪಿ-29 ಎಂದು, ನಿಪಿ-29 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು, ನಿಪಿ-29 ರಲ್ಲಿ ಸಾಕ್ಷಿ ಗುರುತಿಸಿದ 1 ನೇ ಆರೋಪಿಯ ಸಹಿಯನ್ನು ನಿಪಿ-29(ಬಿ) ಎಂದು ಗುರುತಿಸಲಾಯಿತು. 3 ಆರೋಪಿ ತನ್ನ ಸ್ವ-ಇಚ್ಛಾ ಹೇಳಿಕೆಯಲ್ಲಿ "ಕೃತ್ಯಕ್ಕೆ ಉಪಯೋಗಿಸಿದ್ದ ಮೂರು ಕತ್ತಿಗಳನ್ನು ಹಾಗೂ ಕೃತ್ಯದ ಸಮಯದಲ್ಲಿ ತಾನು ಧರಿಸಿದ್ದ ಬಟ್ಟೆಗಳನ್ನು ತನ್ನ ವಾಸದ ಮನೆಯ ಹಿಂಭಾಗದ ಗೋಡೆಯ ಒತ್ತಿನಲ್ಲಿ ಇಟ್ಟಿದ್ದು, ತನ್ನನ್ನು ಕರೆದುಕೊಂಡು ಹೋದರೆ ತೆಗೆದುಕೊಡುತ್ತೇನೆ" ಎಂದು ಹೇಳಿರುತ್ತಾನೆ. 3 ನೇ ಆರೋಪಿಯ ಸ್ವ-ಇಚ್ಛಾ ಹೇಳಿಕೆಯ ಸದರಿ ನಿರ್ದಿಷ್ಟ ಭಾಗವನ್ನು ನಿಪಿ-30 ಎಂದು, ನಿಪಿ-30 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-30(ಎ) ಎಂದು, ನಿಪಿ-30 ರಲ್ಲಿ ಸಾಕ್ಷಿ ಗುರುತಿಸಿದ 3 ನೇ ಆರೋಪಿಯ ಸಹಿಯನ್ನು ನಿಪಿ-30(ಬಿ) ಎಂದು ಗುರುತಿಸಲಾಯಿತು.

10. ನಂತರ 1 ಮತ್ತು 3 ನೇ ಆರೋಪಿತರು ದಾರಿ ತೋರಿಸಿದ ಮೇರೆಗೆ ನಾನು, ಪಂಚರು ಮತ್ತು ಸಿಬ್ಬಂದಿಗಳು ಇಲಾಖಾ ಜೀಪಿನಲ್ಲಿ ಅರೆಕಾಡುವಿಗೆ ಹೋಗಿದ್ದು, ಅಲ್ಲಿ 1 ಮತ್ತು 3 ನೇ ಆರೋಪಿತರು ಹೇಳಿದ ಸ್ಥಳದಲ್ಲಿ ಜೀಪಿನ್ನು ನಿಲ್ಲಿಸಿದ ನಂತರ 1 ಮತ್ತು 3 ನೇ ಆರೋಪಿತರು ತಾವು ಮುಂದಾಗಿ ಹೋಗಿ ತಮ್ಮ ವಾಸದ ಮನೆಯನ್ನು ತೋರಿಸಿಕೊಟ್ಟು ನಮ್ಮನ್ನು ಅವರ ವಾಸದ ಮನೆಯ ಹಿಂಭಾಗಕ್ಕೆ ಕರೆದುಕೊಂಡು ಹೋಗಿ ಹಿಂಭಾಗದ ಗೋಡೆಯ ಬದಿಯಲ್ಲಿ ಸುತ್ತಿಟ್ಟಿದ್ದ ಬಟ್ಟೆಗಳನ್ನು ನನ್ನ ಮುಂದೆ ಹಾಜರುಪಡಿಸಿ ಅದೇ ಬಟ್ಟೆಗಳನ್ನು ಘಟನಾ

ದಿನಾಂಕ ತಾವು ಧರಿಸಿದ್ದಾಗಿ ಹೇಳಿದರು. ಸದರಿ ಬಟ್ಟೆಗಳು ನ್ಯಾಯಾಲಯದ ಮುಂದೆ ಇರುವ ಮು.ಮಾ-10 ರಿಂದ 13 ಆಗಿರುತ್ತವೆ, ಅವುಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಬಿಳಿ ಚೀಲಕ್ಕೆ ಹಾಕಿ, ಹೊಲೆದು, ಸೀಲು ಮಾಡಿ ವಶಕ್ಕೆ ಪಡೆದಿದ್ದೆ. ಅದೇ ಸ್ಥಳದಲ್ಲಿ ಇಟ್ಟಿದ್ದ ಮೂರು ಕತ್ತಿಗಳನ್ನು 1 ಮತ್ತು 3 ನೇ ಆರೋಪಿತರು ನನ್ನ ಸಮಕ್ಷಮ ಹಾಜರುಪಡಿಸಿ, ಅವುಗಳನ್ನು ಕೃತ್ಯಕ್ಕೆ ಉಪಯೋಗಿಸಿದ್ದಾಗಿ ಹೇಳಿದ್ದರು. ಸದರಿ ಕತ್ತಿಗಳು ನಾನು ಈಗ ನ್ಯಾಯಾಲಯದ ಮುಂದೆ ನೋಡುತ್ತಿರುವ ಮು.ಮಾ-3 ರಿಂದ 5 ಆಗಿರುತ್ತವೆ, ಅವುಗಳನ್ನು ಮೇಲೆ ಹೇಳಿದಂತೆ ಪ್ರತ್ಯೇಕ-ಪ್ರತ್ಯೇಕವಾಗಿ ಬಿಳಿ ಚೀಲಕ್ಕೆ ಹಾಕಿ, ಹೊಲೆದು, ಸೀಲು ಮಾಡಿ ವಶಕ್ಕೆ ಪಡೆದಿದ್ದೆ. ಮು.ಮಾ-3 ರಿಂದ 5 ಹಾಗೂ ಮು.ಮಾ-10 ರಿಂದ 13 ರನ್ನು ನಾನು ನಿಪಿ-8 ಮಹಜರ್ ನಡಿ ಬೆಳಿಗ್ಗೆ 11.15 ರಿಂದ 12.15 ರ ಸಮಯದಲ್ಲಿ ವಶಕ್ಕೆ ಪಡೆದಿದ್ದೆ. ನಿಪಿ-8 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು. ನಿಪಿ-8 ನ್ನು ಚಾಸಾ-20 ರವರು ಬರೆದಿದ್ದರು. ನಿಪಿ-8 ರ ಸಂದರ್ಭ ಪ್ರಾಸಾ-13 ರವರ ಮೂಲಕ ಫೋಟೊ ತೆಗೆಸಿರುತ್ತೇನೆ ಮತ್ತು ವಿಡಿಯೋ ಚಿತ್ರೀಕರಣ ಮಾಡಿಸಿರುತ್ತೇನೆ. ಆ ಸಂದರ್ಭ ತೆಗೆದ 3 ಫೋಟೊಗಳನ್ನು ನಾನು ಈಗ ನೋಡುತಿದ್ದು, ಅವುಗಳನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿರುತ್ತದೆ. ನಿಪಿ-10 DVD ಯಲ್ಲಿ ಇರುವ ದೃಶ್ಯಾವಳಿಗಳನ್ನು ನಿಪಿ-8 ರ ಸಮಯದಲ್ಲಿ ಚಿತ್ರೀಕರಣ ಮಾಡಲಾಗಿತ್ತು.

11. ನಂತರ ಆರೋಪಿತರು ಹಾಗೂ ಸ್ವತ್ತಿನೊಂದಿಗೆ ಠಾಣೆಗೆ ಆಗಮಿಸಿ ವಶಪಸಿಕೊಂಡ ಸ್ವತ್ತುಗಳನ್ನು ಠಾಣಾ ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು.

12. ನಂತರ 1 ಹಾಗೂ 3 ನೇ ಆರೋಪಿತರನ್ನು ಅವರ ರಕ್ತದ ಗುಂಪನ್ನು ಪರೀಕ್ಷಿಸಿ ವರದಿ ನೀಡುವಂತೆ ಕೋರಿಕೆ ಪತ್ರದೊಂದಿಗೆ ಸಿಬ್ಬಂದಿಗಳೊಂದಿಗೆ

ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಕೊಟ್ಟೆನು. ಆ ನಂತರ 1 ಮತ್ತು 3 ನೇ ಆರೋಪಿತರು ಮುಂದಿನ ತನಿಖೆಗೆ ಅವಶ್ಯ ಇಲ್ಲದ ಕಾರಣ ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಸಿಬ್ಬಂದಿಗಳ ಮೂಲಕ ಹಾಜರುಪಡಿಸಿದೆನು.

13. ನಂತರ ತನಿಖಾ ಸಂದರ್ಭ ವಶಪಡಿಸಿಕೊಂಡಿದ್ದ ಮು.ಮಾ-1, 2, 6, 7 ಹಾಗೂ 8 ನ್ನು ಠಾಣಾ ಸಿಬ್ಬಂದಿಯಾದ ಕೃಷ್ಣಮೂರ್ತಿ ರವರ ಮೂಲಕ ಮೈಸೂರಿನ RFSL ಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಅದೇ ದಿನ ಪ್ರಾಸಾ-7, 8 ಹಾಗೂ ಚಾಸಾ-17 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡೆನು.

14. ದಿನಾಂಕ 10-10-2022 ರಂದು ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಜೀಪನ್ನು ಪರೀಕ್ಷಿಸಿ ವರದಿ ನೀಡುವಂತೆ ಹಾಗೂ ನಷ್ಟದ ಅಂದಾಜು ಮೌಲ್ಯವನ್ನು ನಿರ್ಧರಿಸಿ ದೃಢೀಕರಣ ಪತ್ರ ನೀಡುವಂತೆ ಚಾಸಾ-23 ರವರಿಗೆ ಮನವಿ ಪತ್ರವನ್ನು ಕಳುಹಿಸಿಕೊಟ್ಟೆನು.

15. ನಂತರ ದಿನಾಂಕ 11-10-2022 ರಂದು ಮೈಸೂರಿನ RFSL ಕಛೇರಿಯವರು ಈ ಪ್ರಕರಣದ ಸ್ವತ್ತುಗಳನ್ನು ಪರೀಕ್ಷೆಗಾಗಿ ಸ್ವೀಕರಿಸಿದ ಬಗ್ಗೆ ನೀಡಿದ ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇನೆ ಮತ್ತು ಪ್ರಾಸಾ-11 ರವರನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುತ್ತೇನೆ.

16. ದಿನಾಂಕ 12-10-2022 ರಂದು ಮು.ಮಾ-3 ರಿಂದ 5 ನ್ನು ಪರೀಕ್ಷಿಸಿ ಅಭಿಪ್ರಾಯ ವರದಿ ನೀಡುವಂತೆ ಕೋರಿ ಸಿದ್ದಾಪುರ ಸರ್ಕಾರಿ ಆಸ್ಪತ್ರೆಯ ವೈದ್ಯರಾದ ಪ್ರಾಸಾ-19 ರವರಿಗೆ ಮನವಿ ಪತ್ರವನ್ನು ಮು.ಮಾ-3 ರಿಂದ 5 ರೊಂದಿಗೆ ಕಳುಹಿಸಿಕೊಟ್ಟೆನು. ಅದೇ ದಿನ ಪ್ರಾಸಾ-19 ರವರು ಮು.ಮಾ-3 ರಿಂದ 5 ನ್ನು ಪರೀಕ್ಷಿಸಿ ನಿಪಿ-24 ರಂತೆ ಅಭಿಪ್ರಾಯ ನೀಡಿದ್ದನ್ನು ಸ್ವೀಕರಿಸಿರುತ್ತೇನೆ. ನಿಪಿ-24 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-24(ಬಿ) ಎಂದು ಗುರುತಿಸಲಾಯಿತು.

17. ದಿನಾಂಕ 14-10-2022 ರಂದು ಮೈಸೂರಿನ ವಿಧಿ ವಿಜ್ಞಾನ ಪ್ರಯೋಗ ಶಾಲೆಯಿಂದ ಕಳುಹಿಸಿಕೊಟ್ಟ ನಿಪಿ-19 ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿದೆನು. ನಿಪಿ-19 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.

18. ದಿನಾಂಕ 20-10-2022 ರಂದು ಮು.ಮಾ-3 ರಿಂದ 5 ಹಾಗೂ ಮು,ಮಾ-10 ರಿಂದ 13 ನ್ನು ಪರೀಕ್ಷಿಸಿ ವರದಿ ನೀಡುವಂತೆ ಮನವಿ ಪತ್ರದೊಂದಿಗೆ ಪ್ರಾಸಾ-12 ರವರ ಮೂಲಕ ಮೈಸೂರಿನ RFSL ಕಛೇರಿಗೆ ಕಳುಹಿಸಿಕೊಟ್ಟೆನು.

19. ದಿನಾಂಕ 22-10-2022 ರಂದು RFSL ಮೈಸೂರಿನವರು ನೀಡಿದ ಸ್ವೀಕೃತಿ ಪತ್ರವನ್ನು ಪ್ರಾಸಾ-12 ರವರು ತಂದು ಹಾಜರುಡಿಸಿದ್ದನ್ನು ಸ್ವೀಕರಿಸಿ, ಪ್ರಾಸಾ-12 ರವರ ಹೇಳಿಕೆಯನ್ನು ದಾಖಲಿಸಿದೆನು.

20. ದಿನಾಂಕ 24-10-2022 ರಂದು ಪ್ರಾಸಾ-19 ರವರು ನೀಡಿದ ಪ್ರಾಸಾ-2 ರವರ ನಿಪಿ-23 ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿದೆನು. ನಿಪಿ-23 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-23(ಬಿ) ಎಂದು ಗುರುತಿಸಲಾಯಿತು.

21. ದಿನಾಂಕ 02-11-2022 ರಂದು ಮೈಸೂರಿನ ವಿಧಿ ವಿಜ್ಞಾನ ಪ್ರಯೋಗ ಶಾಲೆಯಿಂದ ಕಳುಹಿಸಿಕೊಟ್ಟ ನಿಪಿ-20 ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿದೆನು. ನಿಪಿ-20 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು.

22. ದಿನಾಂಕ 04-11-2022 ರಂದು ಚಾಸಾ-22 ರವರು ಕಳುಹಿಸಿಕೊಟ್ಟ ನಿಪಿ-27 ನ್ನು ಸ್ವೀಕರಿಸಿದೆನು.

23. ದಿನಾಂಕ 04-11-2022 ರಂದು ಮಂಗಳೂರಿನ ಕೆ.ಎಂ.ಸಿ ಆಸ್ಪತ್ರೆಯಿಂದ ಪ್ರಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ನಿಪಿ-17 ಮತ್ತು ನಿಪಿ-18 X-ray ವರದಿಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿದೆನು. ನಿಪಿ-17 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-17(ಬಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಮಡಿಕೇರಿ ಜಿಲ್ಲಾ ಆಸ್ಪತ್ರೆಯವರು ಪ್ರಾಸಾ-1 ರವರಿಗೆ ನೀಡಿದ ಡಿಸ್‌ಚಾರ್ಜ್ ಸಮ್ಮರಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಡಿಸ್‌ಚಾರ್ಜ್ ಸಮ್ಮರಿಯನ್ನು ನಾನು ಈಗ ನೋಡುತಿದ್ದು, ಸಾಕ್ಷಿ ಗುರುತಿಸಿದ ಡಿಸ್‌ಚಾರ್ಜ್ ಸಮ್ಮರಿಯನ್ನು ನಿಪಿ-31 ಎಂದು, ನಿಪಿ-31 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-31(ಎ) ಎಂದು ಗುರುತಿಸಲಾಯಿತು.

24. ದಿನಾಂಕ 05-11-2022 ರಂದು ಈ ಪ್ರಕರಣದ 2 ನೇ ಆರೋಪಿ ಮಾನ್ಯ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ನನ್ನ ಮುಂದೆ ಠಾಣೆಯಲ್ಲಿ ಹಾಜರಾಗಿದ್ದು, ಆತನನ್ನು ವಿಚಾರಿಸಿ ಆತನ ಸ್ವ-ಇಚ್ಛಾ ಹೇಳಿಕೆಯನ್ನು ಪಡೆದೆನು. 2 ನೇ ಆರೋಪಿಯು ತನ್ನ ಸ್ವ-ಇಚ್ಛಾ ಹೇಳಿಕೆಯಲ್ಲಿ ಕೃತ್ಯ ಸಮಯದಲ್ಲಿ ತಾನು ಧರಿಸಿದ್ದ ಬಟ್ಟೆಗಳನ್ನು ತನ್ನ ವಾಸದ ಮನೆಯ ಕಾಂಪೌಂಡಿನ ಒತ್ತಿನಲ್ಲಿ ಇರುವ ತನ್ನ ಕಾಫಿ ತೋಟದಲ್ಲಿ ಇದ್ದ ಒಂದು ಪಾಣಿವಾಳ ಮರದಲ್ಲಿ ಇಟ್ಟಿರುವುದಾಗಿ ಮತ್ತು ತನ್ನೊಂದಿಗೆ ಬಂದಿಲ್ಲಿ ತೋರಿಸಿಕೊಡುವುದಾಗಿ ಎಂದು ಹೇಳಿರುತ್ತಾನೆ. ನಂತರ 2 ನೇ ಆರೋಪಿಯು ನಮ್ಮನ್ನು ಅರೆಕಾಡು ಗ್ರಾಮದಲ್ಲಿ ಇರುವ ಆತನ ವಾಸದ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿಗೆ ಪಂಚರಾದ ಪ್ರಾಸಾ-9 ಹಾಗೂ ಪ್ರಾಸಾ-10 ರವರನ್ನು ನಾನು ಕರೆಸಿ ಅವರಿಗೆ ಪಂಚರಾಗಿ ಸಹಕರಿಸುವಂತೆ ಕೋರಿದ ಮೇರೆಗೆ ಅವರುಗಳು ಒಪ್ಪಿಕೊಂಡರು. ನಂತರ 2 ನೇ ಆರೋಪಿ ನಮ್ಮನ್ನು ತನ್ನ ತೋಟದಲ್ಲಿ ಇರುವ ಪಾಣಿವಾಳ ಮರನ್ನು ತೋರಿಸಿಕೊಟ್ಟಿದ್ದು, ಅದನ್ನು ಪರಿಶೀಲಿಸಲಾಗಿ ಅದರಲ್ಲಿ ಯಾವುದೇ ಬಟ್ಟೆಗಳು ಕಂಡು ಬಂದಿರಲಿಲ್ಲ. ಆ

ಸಂದರ್ಭ ನಿಪಿ-11 ರಂತೆ ಸಂಜೆ 5.00 ಗಂಟೆಯಿಂದ 5.45 ರ ವರೆಗೆ ಪಂಚನಾಮ ಕ್ರಮವನ್ನು ಜರುಗಿಸಿದೆನು. ನಿಪಿ-11 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-11(ಡಿ) ಎಂದು ಗುರುತಿಸಲಾಯಿತು. ಆ ಸಂದರ್ಭ ಪ್ರಾಸಾ-15 ರವರ ಮೂಲಕ ಫೋಟೊ ತೆಗೆಸಲಾಯಿತು ಹಾಗೂ ವಿಡಿಯೋ ಚಿತ್ರೀಕರಣವನ್ನು ಮಾಡಲಾಯಿತು. ಆ ಸಂದರ್ಭ ನಿಪಿ-12 ಫೋಟೋವನ್ನು ತೆಗೆಯಲಾಗಿತ್ತು ಮತ್ತು ನಿಪಿ-13 ಸಿಡಿಯಲ್ಲಿ ಇರುವ ದೃಶ್ಯಾವಳಿಗಳನ್ನು ಚಿತ್ರೀಕರಣ ಮಾಡಲಾಗಿತ್ತು.

25. ನಂತರ 2 ನೇ ಆರೋಪಿಯೊಂದಿಗೆ ಠಾಣೆಗೆ ಹಿಂತಿರುಗಿರುತ್ತೇನೆ. ಠಾಣೆಯಲ್ಲಿ ಪ್ರಾಸಾ-15 ರವರು ಫೋಟೊ ಹಾಗೂ ವಿಡಿಯೋಗಳನ್ನು ಪ್ರಿಂಟ್ ಹಾಕಿಸಿ ನೀಡಿದ ಬಗ್ಗೆ ನಿಪಿ-14 ರಂತೆ ಭಾರತೀಯ ಸಾಕ್ಷ್ಯಾಧಿನಿಯಮ 65(ಬಿ) ರಡಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ನಿಪಿ-14 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-14(ಬಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಪ್ರಾಸಾ-9, 10, 13, 15, ಚಾಸಾ-16 ಹಾಗೂ 20 ರವರ ಹೇಳಿಕೆಗಳನ್ನು ದಾಖಲಿಸಿದೆನು. ನಂತರ ಅದೇ ದಿನ 2 ನೇ ಆರೋಪಿಯ ರಕ್ತದ ಗುಂಪನ್ನು ಪರೀಕ್ಷಿಸಿ ವರದಿ ನೀಡುವಂತೆ ಸಿದ್ದಾಪುರ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಯವರಿಗೆ ನಿಪಿ-26 ಮನವಿ ಪತ್ರದೊಂದಿಗೆ 2 ನೇ ಆರೋಪಿಯನ್ನು ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ 2 ನೇ ಆರೋಪಿಯ ರಕ್ತದ ಗುಂಪನ್ನು ಪರೀಕ್ಷಿಸಿ ವೈದ್ಯರು ನಿಪಿ-26 ರಲ್ಲಿ ಆತನ ರಕ್ತದ ಗುಂಪು 'B' positive ಆಗಿರುತ್ತದೆ ಎಂದು ಹಿಂಬರಹವನ್ನು ನೀಡಿರುತ್ತಾರೆ. ನಿಪಿ-26 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-26(ಬಿ) ಎಂದು ಗುರುತಿಸಲಾಯಿತು.

26. ದಿನಾಂಕ 10-11-2022 ರಂದು ಪ್ರಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಪ್ರಾಸಾ-19 ರವರು ನಿಪಿ-22 ರಂತೆ ನೀಡಿದ್ದನ್ನು ಸ್ವೀಕರಿಸಿ ಕಡತಕ್ಕೆ

ಅಳವಡಿಸಿದೆನು. ನಿಪಿ-22 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-22(ಬಿ) ಎಂದು ಗುರುತಿಸಲಾಯಿತು.

27. ದಿನಾಂಕ 21-11-2022 ರಂದು ಚಾಸಾ-19 ರವರ ಹೇಳಿಕೆಯನ್ನು ಪಡೆದೆನು ಮತ್ತು ದಿನಾಂಕ 22-11-2022 ರಂದು ಜೀಪನ್ನು ಪರಿಶೀಲಿಸಿ ನಷ್ಟವನ್ನು ಅಂದಾಜಿಸಿ ಚಾಸಾ-23 ರವರು ನೀಡಿದ ವರದಿಯನ್ನು ಸ್ವೀಕರಿಸಿ ಕಡತ್ಕೆ ಅಳವಡಿಸಿದೆನು. ಸದರಿ ವರದಿಯನ್ನು ನಾನು ಈಗ ನೋಡುತಿದ್ದು, ಸಾಕ್ಷಿ ನೀಡಿದ ವರದಿಯನ್ನು 1 ರಿಂದ 3 ನೇ ಆರೋಪಿತರ ತಕರಾರಿಗೆ ಒಳಪಟ್ಟು ನಿಪಿ-32 ಎಂದು ಗುರುತಿಸಲಾಯಿತು. ನಿಪಿ-32 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-32(ಎ) ಎಂದು ಗುರುತಿಸಲಾಯಿತು. ನಿಪಿ-32 ರಲ್ಲಿ ಜಖಂಗೊಂಡ ಜೀಪಿನ ಮುಂಭಾಗದ ಗ್ಲಾಸಿನ ಅಂದಾಜು ಮಾರುಕಟ್ಟೆ ಮೌಲ್ಯ ರೂ.4,869/- ಇರುತ್ತದೆ ಎಂಬುದಾಗಿ ಚಾಸಾ-23 ರವರು ನಮೂದಿಸಿರುತ್ತಾರೆ. ಈಗ ನಾನು ನ್ಯಾಯಾಲಯದಲ್ಲಿ ನೋಡುತ್ತಿರುವ ವರದಿಗಳು 1 ಹಾಗೂ 3 ನೇ ಆರೋಪಿಯ ರಕ್ತದ ಗುಂಪಿನ ವರದಿ ಆಗಿದ್ದು, ಸಾಕ್ಷಿ ಗುರುತಿಸಿದ ಸದರಿ ವರದಿಗಳನ್ನು ನಿಪಿ-33 ಮತ್ತು ನಿಪಿ-34 ಎಂದು, ಅವುಗಳಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಗಳನ್ನು ನಿಪಿ-33(ಎ) ಮತ್ತು ನಿಪಿ-34(ಎ) ಎಂದು ಗುರುತಿಸಲಾಯಿತು.

28. ನಂತರ ದಿನಾಂಕ 23-11-2022 ರಂದು ತನಿಖೆಯನ್ನು ಮುಕ್ತಾಯಗೊಳಿಸಿ ತನಿಖೆಯಲ್ಲಿ ಆರೋಪಿಗಳು ಕೃತ್ಯ ಎಸಗಿರುವುದು ಕಂಡು ಬಂದಿರುವುದರಿಂದ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದೆನು.

29. ಪ್ರಾಸಾ-4 ರವರ ನಿಪಿ-7 ರಂತೆ ನನ್ನ ಮುಂದೆ ಹೇಳಿಕೆ ನೀಡಿರುತ್ತಾರೆ. ನಾನು ದಸ್ತಗಿರಿ ಮಾಡಿದ ಆರೋಪಿಗಳ ಪೈಕಿ ಈ ದಿನ 1 ಮತ್ತು 3 ನೇ

ಆರೋಪಿತರು ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. 2 ನೇ ಆರೋಪಿ ಈ ದಿನ ಗೈರು ಹಾಜರಿದ್ದು, 2 ನೇ ಆರೋಪಿಯ ಗುರುತಿಸುವಿಕೆಯ ಬಗ್ಗೆ ತರಕಾರು ಇಲ್ಲ ಎಂದು ಶ್ರೀ.ಪಿ.ಕೆ.ಎಂ. ವಕೀಲರು ನಿವೇದಿಸಿರುತ್ತಾರೆ.

30. ನಿಪಿ-4, ನಿಪಿ-10 ಹಾಗೂ ನಿಪಿ-13 ಸಿಡಿಗಳನ್ನು ನ್ಯಾಯಾಲಯದಲ್ಲಿ ಪ್ರದರ್ಶಿಸಲು ಸರ್ಕಾರಿ ಅಭಿಯೋಜಕರು ಮನವಿ ಮಾಡಿದ್ದು, ಸದರಿ ಮನವಿಯನ್ನು ಪುರಸ್ಕರಿಸಿ ನಿಪಿ-4, ನಿಪಿ-10 ಹಾಗೂ ನಿಪಿ-13 ಸಿಡಿಗಳನ್ನು ನ್ಯಾಯಾಲಯದಲ್ಲಿ ಪ್ರದರ್ಶಿಸಲಾಯಿತು.

ನಿಪಿ-4 ರಲ್ಲಿ ಇರುವ ಒಟ್ಟು 19 ಫೋಟೊಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

ನಿಪಿ-10 ರಲ್ಲಿ ಇರುವ ಒಟ್ಟು 5 ಫೋಟೋಗಳನ್ನು ಮತ್ತು ಒಂದು ವಿಡಿಯೋವನ್ನು ನೋಡಿ ನಿಪಿ-8 ಮಹಜರ್ ನ ಸಂದರ್ಭ ಅವುಗಳನ್ನು ತೆಗೆಯಲಾಗಿತ್ತು ಮತ್ತು ಮಾಡಲಾಗಿತ್ತು ಎಂದು ಸಾಕ್ಷಿ ಗುರುತಿಸಿರುತ್ತಾರೆ.

ನಿಪಿ-13 ರಲ್ಲಿ ಇರುವ ವಿಡಿಯೋವನ್ನು ಪ್ಲೇ ಮಾಡಿದಾಗ ಸಾಕ್ಷಿ ಅದನ್ನು ನೋಡಿ ನಿಪಿ-11 ರ ಸಮಯ ಅದನ್ನು ಚಿತ್ರೀಕರಣ ಮಾಡಲಾಗಿತ್ತು ಎಂದು ಗುರುತಿಸಿರುತ್ತಾರೆ.

**ಪಾಟೀಸವಾಲು- 1 ರಿಂದ 3 ನೇ ಆರೋಪಿತರ ಪರವಾಗಿ ಶ್ರೀ ಪಿ.ಕೆ.ಎಂ., ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಸಾಕ್ಷಿಯ ಪಾಟೀಸವಾಲನ್ನು ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ